Kind A.N. Sri M.K Managond
Asst Exec. Engineer
P.I.U. KUWASIP KUIDFC Dharwad

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಹುಬ್ಬಳ್ಳಿ-ಧಾರವಾಡ, ಬೆಳಗಾಂ ಮತ್ತು ಗುಲ್ಬರ್ಗಾ ನಗರಪಾಲಿಕೆ ವ್ಯಾಪ್ತಿಯ ಎಲ್ಲಾ ಪ್ರದೇಶಗಳಲ್ಲಿ 24X7 ನಿರಂತರ ನೀರು ಸರಬರಾಜನ್ನು ಉನ್ನತೀಕರಿಸುವ ಬಗ್ಗೆ

ಓದಲಾಗಿದೆ:-

ಸರ್ಕಾರಿ ಆದೇಶ ಸಂಖ್ಯೆ:ನಅಇ26ಪಿಆರ್‌ಜೆ2003, ದಿನಾಂಕ:07-02-2004 ಮತ್ತು 07-06-2005

ಪ್ರಸ್ತಾವನೆ:-

ಮೇಲೆ ಓದಲಾದ ಸರ್ಕಾರಿ ಆದೇಶಗಳಲ್ಲಿ ವಿಶ್ವಬ್ಯಾಂಕ್ ನೆರವಿನೊಂದಿಗೆ ಕರ್ನಾಟಕ ನಗರ ನೀರು ಸಬರಾಜು ಸುಧಾರಣಾ ಯೋಜನೆ (KUWASIP) ಅಡಿ ಹುಬ್ಬಳ್ಳಿ-ಧಾರವಾಡ, ಬೆಳಗಾಂ ಮತ್ತು ಗುಲ್ಬರ್ಗಾ ನಗರಗಳಿಗೆ 24X7 ನಿರಂತರ ನೀರು ಸರಬರಾಜು ಸೇವೆಯನ್ನು ಒದಗಿಸಲು ಆಯ್ಕೆ ಮಾಡಿ ಆದೇಶಿಸಲಾಗಿದೆ. ಈ ಮೂರು ಪ್ರಾತ್ಯಕ್ಷಿಕ ವಲಯಗಳಲ್ಲಿ ನಿರಂತರ ಮತ್ತು ಸುರಕ್ಷಿತ ನೀರು ಸರಬರಾಜು ಈ ಯೋಜನೆಯನ್ನು ಪರೀಕ್ಷಾರ್ಥಕವಾಗಿ ಕೈಗೊಳ್ಳಲಾಗಿದೆ. ಈ ಯೋಜನೆಯನ್ನು ಪ್ರಾತ್ಯಕ್ಷಿಕ ವಲಯಗಳಲ್ಲಿ ಕಾರ್ಯರೂಪಕ್ಕೆ ತರಲು ಎರಡು ವರ್ಷಗಳ ಕರಾರಿನ ಮೇಲೆ ಅಭಿವೃದ್ಧಿ ಮತ್ತು ನಿರ್ವಹಣೆ ಹಾಗೂ ಉಸ್ತುವಾರಿಯನ್ನು ಖಾಸಗಿವಲಯದ ನಿರ್ವಹಣೆದಾರರಿಗೆ ವಹಿಸಲಾಗಿದೆ. ಈ ಯೋಜನೆಯ ಒಟ್ಟು ವೆಚ್ಚ ರೂ.237.04 ಕೋಟಿಗಳು(ಯು.ಎಸ್.$51.53 ಮಿಲಿಯನ್). ಇದರಲ್ಲಿ ರೂ.181.70 ಕೋಟಿಗಳನ್ನು ವಿಶ್ವಬ್ಯಾಂಕ್ ನಿಂದ ಸಾಲವಾಗಿ ಮತ್ತು ರೂ.55.34 ಕೋಟಿಗಳು ರಾಜ್ಯ ಸರ್ಕಾರದ ಪಾಲಾಗಿರುತ್ತದೆ.

ಈ ಯೋಜನೆಯ ಅಭಿವೃದ್ಧಿಯು ಅಂತಿಮ ಹಂತದಲ್ಲಿರುತ್ತದೆ. ಈ ಸಗಟು ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ ಒಂದು ಕಾಮಗಾರಿಯನ್ನು ಹೊರತು ಪಡಿಸಿ ಸಗಟು ನೀರು ಸರಬರಾಜನ್ನು ಸುಧಾರಣೆಗೊಳಿಸಿ 27ಎಂಎಲ್‌ಡಿ ನೀರನ್ನು ಬೆಳಗಾಂ ನಗರಕ್ಕೆ, 30 ಎಂಎಲ್‌ಡಿ ನೀರನ್ನು ಗುಲ್ಬರ್ಗಾ ನಗರಕ್ಕೆ ಮತ್ತು 2ಎಂಎಲ್‌ಡಿ ನೀರನ್ನು ಹುಬ್ಬಳ್ಳಿ-ಧಾರವಾಡ ನಗರಕ್ಕೆ ಒದಗಿಸಬಹುದಾಗಿದೆ.

ಐದು ಪ್ರಾತ್ಯಕ್ಷಿಕೆ ವಲಯಗಳ ನೀರು ಸರಬರಾಜು ಕಾರ್ಯಜಾಲವನ್ನು ಮರಳ್ ಸ್ಥಾಪಿಸಿ, ಮೂರು ನಗರ ಸ್ಥಳೀಯ ಸಂಸ್ಥೆಗಳಿಗೆ ವಿಸ್ತರಿಸಲಾಗಿದೆ. ( ಬೆಳಗಾಂ ನಗರ ಎರಡು ಪ್ರಾತ್ಯಕ್ಷಿಕೆ ವಲಯಗಳು ಮತ್ತು ತಲಾ ಒಂದರಂತೆ, ಹುಬ್ಬಳ್ಳಿ, ಧಾರವಾಡ ಮತ್ತು ಗುಲ್ಬರ್ಗಾ) ಈ ಐದು ಪ್ರಾತ್ಯಕ್ಷಿಕೆ ವಲಯಗಳಲ್ಲಿ 24X7 ನಿರಂತರ ನೀರು ಸರಬರಾಜು ಹಾಗೂ ನಿರ್ವಹಣೆಯನ್ನು ಕಾರ್ಯಧಾರಿತ ಆಧಾರದ ಗುತ್ತಿಗೆ ಮೇಲೆ ಖಾಸಗಿ ನಿರ್ವಹಕರಾದ M/s. Compagnie Generale Des Eaux (C.G.E), **Paris, France**, ಇವರಿಗೆ ಏಪ್ರಿಲ್-2008 ರಿಂದ ವಹಿಸಲಾಗಿದೆ. ಈ ಯೋಜನೆಯಡಿ ಒಟ್ಟು 23,963 ಮನೆಗಳಲ್ಲಿ 22,450 ಮನೆಗಳಿಗೆ ನೀರು ಸರಬರಾಜಿನ ಸಂಪರ್ಕವನ್ನು ಒದಗಿಸುವ ಗುರಿ ಹೊಂದಲಾಗಿದೆ.

ಪ್ರಾತ್ಯಕ್ಷಿಕತೆಯ ವಲಯಗಳಲ್ಲಿ ನಿರಂತರ ನೀರು ಸರಬರಾಜು (24 x7) ಅನುಷ್ಠಾನವು ಯಶಸ್ವಿಯಾಗಿ ಎಲ್ಲಾ ಮೂರು ಮಹಾನಗರ ಪಾಲಿಕೆಗಳು ನಿರ್ಣಯಗಳನ್ನು ಪಾಸು ಮಾಡಿ, ಸಂಬಂಧಪಟ್ಟ ನಗರಗಳ ಉಳಿದ ಎಲ್ಲಾ ಭಾಗಗಳಿಗೆ 24 x7 ನೀರು ಸರಬರಾಜು ವ್ಯವಸ್ಥೆಯನ್ನು ಅಳವಡಿಸಲು ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತವೆ.

-2

ಕೆ.ಯು.ಡಬ್ಲ್ಯೂ.ಎ.ಎಸ್.ಐ.ಪಿ. ಯೋಜನೆಯಡಿ 24x7 ನೀರು ಸರಬರಾಜು ವ್ಯವಸ್ಥೆಯನ್ನು ಒಂದು ಹಂತದವರೆಗೆ ಖಾಸಗಿ ಸಂಸ್ಥೆಯವರ ಸಹಾಯದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಸಂಸ್ಥೆಯು ನೀರು ಸರಬರಾಜು ಸಂಪರ್ಕಿತ ಎಲ್ಲಾ ಕೆಲಸಗಳನ್ನು ಅಂದರೆ, ಸರ್ವೆ, ಸಂಪರ್ಕ ಜಾಲದ ವಿನ್ಯಾಸ, ಯೋಜನೆಯನ್ನು ಕಾರ್ಯಗತಗೊಳಿಸಲು ಬಂಡವಾಳ ಯೋಜನೆ ಮತ್ತು ಹೊಸ ವ್ಯವಸ್ಥೆಯ ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತದೆ. ಅಂತಹ ಸಂದರ್ಭಗಳಲ್ಲಿ ಮಾತ್ರ ತಾಂತ್ರಿಕ ತೊಂದರೆಯನ್ನು ಖಾಸಗಿ ಸಂಸ್ಥೆಯೊಡನೆ ಹಂಚಿಕೊಳ್ಳಲಾಗಿರುತ್ತದೆ.

ಪಿ.ಪಿ.ಪಿ. ಭಾಗವಹಿಸುವಿಕೆದಾರರನ್ನು ಬಂಡವಾಳದ ಭಾಗದನ್ನಾಗಿ ಮಾಡಿಕೊಂಡಲ್ಲಿ, ಆಗುವ ವಾಣಿಜ್ಯಕ ತೊಂದರೆಯನ್ನು ಸಹ ಸರ್ಕಾರ ಮತ್ತು ಖಾಸಗಿ ವಲಯದ ಸಹಭಾಗಿತ್ವದಾರರೊಡನೆ ಹಂಚಿಕೊಳ್ಳಬಹುದಾಗಿರುತ್ತದೆ. ಇದರಿಂದ ಯೋಜನೆಯನ್ನು ಕೆ.ಯು.ಡಬ್ಲ್ಯೂ.ಎಸ್.ಐ.ಪಿ. ಯೋಜನೆಗಿಂತ ಒಂದು ಹಂತ ಮೇಲೆ ತೆಗೆದುಕೊಂಡು ಹೋಗಬಹುದಾಗಿರುತ್ತದೆ. ಸಲಹೆ ಮಾಡಿರುವ ವಿಧಾನದಲ್ಲಿ ಎಲ್ಲಾ ಸೇವಾ ಪರತ್ತುಗಳು ಅಂದರೆ, ಶುಲ್ಕವನ್ನು ವಿಧಿಸುವ ಮತ್ತು ಸಂಗ್ರಹಿಸುವ ಜವಾಬ್ದಾರಿಯು ಸರ್ಕಾರಿ ಸಂಸ್ಥೆಗಳ ಜವಾಬ್ದಾರಿಯಾಗಿಯೇ ಮುಂದುವರಿಯುತ್ತದೆ. ವಿತರಣೆಯ ಸಂಪರ್ಕ ಜಾಲ, ವಿನ್ಯಾಸ, ಜಾರಿಗೊಳಿಸುವ ಮತ್ತು ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು ಖಾಸಗಿ ಸಂಸ್ಥೆಗೆ ನೀಡಿದಲ್ಲಿ, ಅದನ್ನು ಸಹ ಬಂಡವಾಳದ ಒಂದು ಭಾಗವನ್ನಾಗಿ ಮಾಡಿಕೊಳ್ಳಬಹುದಾಗಿರುತ್ತದೆ. ಆದಾಯವನ್ನು ಕಡಿಮೆಗೊಳಿಸುವ ಕ್ರಮಗಳನ್ನು ಕೈಗೊಂಡಲ್ಲಿ ಮತ್ತು ಪಿ.ಪಿ.ಪಿ. ಯೋಜನೆಯನ್ನು ಎಚ್ಚರಿಕೆಯಿಂದ ರೂಪಿಸಿದಲ್ಲಿ ನಾಗರೀಕರಿಗೆ ಸಾಧ್ಯವಾದಷ್ಟು ಕಡಿಮೆ ದರದಲ್ಲಿ ಉತ್ತಮ ಸೇವಾ ಸೌಲಭ್ಯವನ್ನು ನೀಡಬಹುದಾಗಿರುತ್ತದೆ. ಕೇಂದ್ರ ಸರ್ಕಾರವು ಯೋಜನಾ ವೆಚ್ಚದ ಶೇಕಡಾ 20 ರವರೆಗೆ ಅಭಿವೃದ್ಧಿ ಅವಕಾಶದ ನಿಧಿಯನ್ನು ನೀಡುತ್ತದೆ. ಇಂತಹ ಮುಖ್ಯವಾದ ಕೆಲಸವನ್ನು ಖಾಸಗಿ ಸಂಸ್ಥೆಯ ಸಹಯೋಗದೊಡನೆ ಕೈಗೆತ್ತಿಗೊಂಡು ಯಶಸ್ವಿಯಾದಲ್ಲಿ ಅಂತಹ ಸಂದರ್ಭದಲ್ಲಿ ಪಿ.ಪಿ.ಪಿ. ಮಾದರಿಯಂತೆ ಯೋಜನೆಯನ್ನು ಪ್ರಾರಂಭಿಕವಾಗಿಯೇ ಕೈಗೆತ್ತಿಕೊಳ್ಳುವುದು ಸಲಹಾತ್ಮಕವಾಗಿರುತ್ತದೆ.

ಸಗಟು ನೀರು ಸರಬರಾಜು ಮಾಡುವ ಬಗ್ಗೆ ಯಾವುದೇ ತೊಂದರೆ ಇರುವುದಿಲ್ಲ. ಬೆಳಗಾಂ ಮತ್ತು ಗುಲ್ಬರ್ಗಾ ನಗರಗಳು 2021ನೇ ಇಸವಿಯವರೆಗಿನ ವಿಸ್ತೃತ ಅವಧಿಯವರೆಗೆ ಸಮರ್ಪಕವಾದ ನೀರು ಸರಬರಾಜು ಮಾಡುವ ಸಾಮರ್ಥ್ಯತೆಯನ್ನು ಹೊಂದಿರುತ್ತದೆ. ಹುಬ್ಬಳ್ಳಿ-ಧಾರವಾಡ ನಗರಕ್ಕೆ ಸಂಬಂಧಿಸಿದಂತೆ 68 ಎಂ.ಎಲ್.ಡಿ. ಸಗಟು ನೀರು ಸರಬರಾಜು ಯೋಜನೆಯನ್ನು ರೂ. 152.00 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಪ್ರತ್ಯೇಕವಾಗಿ ಪ್ರಸ್ತಾಪಿಸಲಾಗಿದ್ದು, ಇದರಿಂದ 2021ನೇ ಇಸವಿಯವರೆಗೆ ನೀರು ಸರಬರಾಜು ಅಗತ್ಯತೆಯನ್ನು ಪೂರೈಸಬಹುದಾಗಿರುತ್ತದೆ. ಈ ಸಂಬಂಧ ಕೆ.ಯು.ಡಬ್ಲ್ಯೂ.ಎಸ್.ಡಿ.ಬಿ.ಯು ಸಗಟು ನೀರು ಸರಬರಾಜು ಯೋಜನೆಯನ್ನು 2008-09ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರಿಸಿಕೊಂಡಿರುತ್ತದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು (KUWSDB) ಬೆಳಗಾಂ, ಗುಲ್ಬರ್ಗಾ ಮತ್ತು ಹುಬ್ಬಳ್ಳಿ-ಧಾರವಾಡ ನಗರಗಳಿಗೆ ಪಾಲಿಕೆಯ ವ್ಯಾಪ್ತಿಯ ಎಲ್ಲಾ ಭಾಗಗಳಿಗೆ 24x7 ನೀರು ಸರಬರಾಜು ವ್ಯವಸ್ಥೆಯನ್ನು ಕಲ್ಪಿಸಲು ವಿನಿಯೋಗಿಸುವ ಬಂಡವಾಳದ ಅಂದಾಜನ್ನು ತಯಾರಿಸಿದೆ. ಅವರ ಲೆಕ್ಕಾಚಾರದಂತೆ ಬೆಳಗಾಂಗೆ ರೂ. 220.00 ಕೋಟಿಗಳು, ಗುಲ್ಬರ್ಗಾಗೆ ರೂ. 155.00 ಕೋಟಿಗಳು ಮತ್ತು ಹುಬ್ಬಳ್ಳಿ ಧಾರವಾಡಕ್ಕೆ ರೂ. 360.00 ಕೋಟಿಗಳು, ಒಟ್ಟಾರೆ ಯೋಜನೆಗೆ ರೂ. 735.00 ಕೋಟಿಗಳು ತಗಲಬಹುದೆಂದು ಅಂದಾಜಿಸಲಾಗಿದೆ.

ಪಿ.ಪಿ.ಪಿ. ಮಾದರಿಯ ಯೋಜನೆಯ ಬಂಡವಾಳದ ಮೇಲ್ಕಂಡ ವಿವರಗಳು ಈ ಕೆಳಕಂಡಂತಿದೆ. ಪಿ.ಪಿ.ಪಿ. ಯೋಜನೆಗಳಿಗೆ ಶೇಕಡಾ 20ರಷ್ಟು ಹಣವನ್ನು ಕೇಂದ್ರ ಸರ್ಕಾರದಿಂದ ನಿರೀಕ್ಷಿಸಲಾಗುತ್ತಿದೆ.

| | | Percentage | Amount(Rs) |
|---|---|---|---|
| 1 | ನಿರ್ಮಾಣ, ನಿರ್ವಹಣೆ ಮತ್ತು ಮೇಲ್ವಿಚಾರಣೆಗಾಗಿ ಖಾಸಗಿ ಸಂಸ್ಥೆಯ ಬಂಡವಾಳ. | 50% | 367.50 |
| 2 | ಆಧಾರದ ಮೇಲೆ ಕೇಂದ್ರ ಸರ್ಕಾರದ ನೆರವಿನ ಬಂಡವಾಳ | 20% | 177.00 |
| 3 | ರಾಜ್ಯ ಸರ್ಕಾರದ ಬಂಡವಾಳ | 20% | 177.00 |
| 4 | ನಗರ ಸ್ಥಳೀಯ ಸಂಸ್ಥೆಯ ಪಾಲು | 10% | 73.50 |
| | **Total** | **100%** | **735.00** |

ಈ ಮೇಲ್ಕಂಡ ಶೇಕಡಾವಾರು ಮತ್ತು ಮೊತ್ತದ ವಿವರವು ಮೇಲ್ಕಂಡ ಹಾಗೂ ನಿರ್ಧಾರಿತವಲ್ಲದ್ದಾಗಿರುತ್ತದೆ. ವಿಸ್ತಾರವಾದ ಯೋಜನಾ ವರದಿಯನ್ನು ಸಿದ್ಧಪಡಿಸಿದ ನಂತರ ಎಷ್ಟು ವೆಚ್ಚವಾಗುತ್ತದೆ ಎಂಬುದರ ಬಗ್ಗೆ ತಿಳಿಯುತ್ತದೆ ಮತ್ತು ಒಂದು ವೇಳೆ ಮೂಲ ಬಂಡವಾಳದಲ್ಲಿ ಹೆಚ್ಚು ಮತ್ತು ಕಡಿಮೆಯಾದಲ್ಲಿ, ಅದರಂತೆ ವಿವಿಧ ಏಜನ್ಸಿಗಳ ಬಂಡವಾಳ ಹಂಚಿಕೆಯಲ್ಲಿ ಬದಲಾವಣೆಯಾಗುತ್ತದೆ. ಯೋಜನೆಯ ಪ್ಯಾಕೇಜ್‌ಗಳ ಪ್ರಸ್ತಾವನೆಯನ್ನು ವಿಸ್ತಾರವಾದ ಯೋಜನಾ ವರದಿಯನ್ನು ಸಿದ್ಧಪಡಿಸುವಾಗ ಅಂತಿಮಗೊಳಿಸಲಾಗುವುದು.

ಖಾಸಗಿ ಗುತ್ತಿಗೆದಾರರಿಗೆ ವಾರ್ಷಿಕವಾಗಿ ಅಂದರೆ, ಗುತ್ತಿಗೆ ಅವಧಿಯಲ್ಲಿ ಯೋಜನೆಯ ನಿರ್ವಹಣೆಯ ಷರತ್ತುಗಳನ್ನು ಪಾಲಿಸಿರುವುದನ್ನು ಗಮನಕ್ಕೆ ತೆಗೆದುಕೊಂಡು ಹಣವನ್ನು ಪಾವತಿಸಲಾಗುವುದು. ಇಂತಹ ಪಾವತಿಯಲ್ಲಿ ಬಂಡವಾಳ ಹೂಡಿಕೆಯ ಹಣ ಮತ್ತು ಸೇವಾ ಶುಲ್ಕದ ಮರುಪಾವತಿಯೂ ಒಳಗೊಂಡಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳ ಕೊಡುಗೆಯು ಅದರ ಸ್ವಂತ ಸಂಪನ್ಮೂಲದ ಹಣ ಅಥವಾ ಎಸ್.ಎಫ್.ಸಿ. ಅನುದಾನದ ಹಣವಾಗಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳು ಸೂಕ್ತ ನೀರಿನ ಶುಲ್ಕ ದರಗಳನ್ನು ಸರ್ಕಾರದ ಸಮಾಲೋಚನೆಯೊಂದಿಗೆ ಅಳವಡಿಸಿಕೊಳ್ಳಬೇಕು. ದರಗಳ ಸಂಗ್ರಹಣೆ ಮತ್ತು ಮರುಪಾವತಿಯು ಆಯಾಯ ಸ್ಥಳೀಯ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ. ಬಿಡುಗಡೆ ಮಾಡಲಾಗುವ ಎಸ್.ಎಫ್.ಸಿ. ಅನುದಾನವನ್ನು ನಗರ ಸ್ಥಳೀಯ ಸಂಸ್ಥೆಗಳು ಭದ್ರತೆಯ ರೂಪವಾಗಿ ಉಪಯೋಗಿಸಿಕೊಳ್ಳಬಹುದಾಗಿರುತ್ತದೆ.

-4

**ಸರ್ಕಾರಿ ಆದೇಶ ಸಂಖ್ಯೆ:ನಅಇ 81 ಪಿಆರ್‌ಜೆ 2008, ಬೆಂಗಳೂರು, ದಿನಾಂಕ:06-10-2008**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಸರ್ಕಾರವು ಈ ಕೆಳಕಂಡ ಅಂಶಗಳಿಗೆ ಮಂಜೂರಾತಿ ನೀಡಿದೆ.

1) ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಆಧಾರದ ಮೇಲೆ ಹುಬ್ಬಳ್ಳಿ-ಧಾರವಾಡ ಬೆಳಗಾಂ ಮತ್ತು ಗುಲ್ಬರ್ಗಾ ನಗರಪಾಲಿಕೆ ವ್ಯಾಪ್ತಿಯ ಎಲ್ಲಾ ಪ್ರದೇಶಗಳಲ್ಲಿ 24X7 ನಿರಂತರ ನೀರು ಸರಬರಾಜನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿದೆ

2) ಈ ಯೋಜನೆಯನ್ನು ಕಾರ್ಯಗತಗೊಳಿಸಲು, ಕರ್ನಾಟಕ ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಯು ನೋಡಲ್ ಏಜೆನ್ಸಿಯಾಗಿದ್ದು, ಸಾರ್ವಜನಿಕ ಖಾಸಗಿ ಸಹಭಾಗಿತ್ವದ (PPP) ಆಧಾರದ ಮೇಲೆ ಸವಿಸ್ತಾರ ಯೋಜನಾ ವರದಿ (DPR) ತಯಾರಿಸಲು ಮತ್ತು RfP / bidding ದಾಖಲಾತಿಗಳ ನಿರ್ವಹಣೆಯನ್ನು ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಗೆ ವಹಿಸಲು ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಸಚಿವ ಸಂಪುಟದ ಪ್ರಕರಣ ಸಂಖ್ಯೆ:ಸಿ:179:2008, ದಿನಾಂಕ:24-09-08ರ ಅನುಮೋದನೆ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೌಸಲ್ಯ) 6/10/08
ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ(ಯೋಮೇಕೋ)

ಇವರಿಗೆ:-

1) ಮಹಾ ಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಭಾರತ ಸರ್ಕಾರದ ಕಾರ್ಯದರ್ಶಿ, ಆರ್ಥಿಕ ವ್ಯವಹಾರಗಳ ಇಲಾಖೆ, ಹಣಕಾಸು ಸಚಿವಾಲಯ, ಉತ್ತರ ಬ್ಲಾಕ್, ನವದೆಹಲಿ.
3) ಭಾರತ ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಮತ್ತು ಬಡತನ ನಿರ್ಮೂಲನಾ ಸಚಿವಾಲಯ, ನಿರ್ಮಾಣ ಭವನ, ನವದೆಹಲಿ.
4) ಕಾರ್ಯದರ್ಶಿ, ಯೋಜನಾ ಆಯೋಗ, ಯೋಜನಾ ಭವನ, ನವದೆಹಲಿ.
5) ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
7) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
8) ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.

9) ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ,

10) ಅಭಿವೃದ್ಧಿ ಆಯುಕ್ತರು, ಉತ್ತರ ಕರ್ನಾಟಕ, ಜಿಲ್ಲಾಧಿಕಾರಿಗಳ ಕಚೇರಿ, ಬೆಳಗಾಂ.

11) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ, ವಿಧಾನ ಸೌಧ, ಬೆಂಗಳೂರು

12) ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

13) ವ್ಯವಸ್ಥಾಪಕ ನಿರ್ದೇಶಕರು, ಕೆಯುಐಡಿಎಫ್‌ಸಿ, ಮಿಷನ್ ರಸ್ತೆ, ಬೆಂಗಳೂರು.

14 ಸರ್ಕಾರದ ಉಪ ಕಾರ್ಯದರ್ಶಿ, (ಸಚಿವ ಸಂಪುಟ) ಡಿಸಿಎ ಮತ್ತು ಡಿಪಿಎಆರ್, ವಿಧಾನ ಸೌಧ, ಬೆಂಗಳೂರು (ಸಿ.ಸಂ:179/2008)

15) ಸರ್ಕಾರದ ಉಪ ಕಾರ್ಯದರ್ಶಿ-3, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.

16) ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಪಿಎಂಯು), ಬೆಂಗಳೂರು

17) ಸರ್ಕಾರದ ಸಹ ಕಾರ್ಯದರ್ಶಿಗಳು/ಆಂತರಿಕ ಆರ್ಥಿಕ ಸಲಹೆಗಾರರು / ಜಂಟಿ ನಿರ್ದೇಶಕರು (ಯೋಜನೆ)/ ಅಧೀನ ಕಾರ್ಯದರ್ಶಿಗಳು/ ನಗರಾಭಿವೃದ್ಧಿ ಇಲಾಖೆ

18) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು.

19) ಮಹಾಪೌರರು, ಹುಬ್ಬಳ್ಳಿ-ಧಾರವಾಡ, ಬೆಳಗಾಂ, ಗುಲ್ಬರ್ಗಾ ನಗರ ಪಾಲಿಕೆಗಳು

20) ಆಯುಕ್ತರು, ಹುಬ್ಬಳ್ಳಿ-ಧಾರವಾಡ, ಬೆಳಗಾಂ, ಗುಲ್ಬರ್ಗಾ ನಗರ ಪಾಲಿಕೆಗಳು

21) ಜಿಲ್ಲಾಧಿಕಾರಿಗಳು, ಹುಬ್ಬಳ್ಳಿ-ಧಾರವಾಡ, ಬೆಳಗಾಂ, ಗುಲ್ಬರ್ಗಾ ನಗರ ಪಾಲಿಕೆಗಳು

22) ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.

23) ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

24) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.